

ಚಿತ್ರ: ಶೇಖರ್ ಕುಮಾರ್ ಬೋಳಾರ್

ಪ್ಯಾರಿಸ್‌ನಿಂದ ಬಂದ ಅರೇಲಿನ್- ಕರೈನ್ ಮಕ್ಕಳಾದ ಲ್ಯುಕಾಸ್ ಮತ್ತು ಕಜ್ರಾ ಅವರೊಂದಿಗೆ

# 'ತಂಪು ತಂಪು ಬೆಂಗಳೂರು'

'ಭಾರತೀಯರು ಅದರಲ್ಲೂ ಬೆಂಗಳೂರಿಗರು ಕೌಟುಂಬಿಕ ಬದುಕಿಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಕುಟುಂಬದ ಹಿರಿಯರಿಗೆ ಬಹಳ ಗೌರವ ಕೊಡುತ್ತಾರೆ. ತಂದೆ ತಾಯಿಯರ ಮೇಲೆ ಬಹಳ ಪ್ರೀತಿ, ಅಭಿಮಾನ ಮಕ್ಕಳಿಗೆ. ಇಂತಹ ಭಾವನಾತ್ಮಕ ಸಂಬಂಧ ಬೇರೆ ದೇಶಗಳಲ್ಲಿ ಇರುವುದು ಕಡಿಮೆ'

ದೇಶ, ಭಾಷೆ, ವೃತ್ತಿ, ತಮ್ಮ ಬಂಧು ಬಾಂಧವರನ್ನು ಬಿಟ್ಟು ದೂರದ ಊರಿಗೆ ಹೋಗಿ ನೆಲೆಸುವುದು ಎಂದರೆ ಅದು ಸುಲಭದ ಮಾತಲ್ಲ. ಇಡೀ ಬದುಕನ್ನೇ ಹೊಸತನಕ್ಕೆ ಒಗ್ಗಿಸಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಕೆಲವೊಮ್ಮೆ ಬರುತ್ತದೆ. ಇದನ್ನು ಸಮರ್ಥವಾಗಿ ನಿಭಾಯಿಸುವುದು ಸವಾಲಿನ ಕೆಲಸ. ವಿದೇಶಗಳಿಂದ ಭಾರತಕ್ಕೆ ಬಂದು ಖಾಯಂ ಆಗಿ ನೆಲೆ ನಿಲ್ಲುವ ಜನರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅದರಲ್ಲೂ ಬೆಂಗಳೂರಿಗೆ ಬರುವ ಎಕ್ಸ್‌ಪಾಟ್‌ಗಳೂ ಕಡಿಮೆಯಿಲ್ಲ. ಎಲ್ಲರೂ ಇಲ್ಲಿಗೆ ಬರುವುದು ಉದ್ಯೋಗದ ನಿಮಿತ್ತವೇ. ಹಾಗೆ ಬಂದು ಇಲ್ಲಿನ ವಾತಾವರಣಕ್ಕೆ, ಸಂಸ್ಕೃತಿಗೆ ಬಹಳ ಬೇಗನೆ ಒಗ್ಗಿಕೊಂಡವರು ಪ್ಯಾರಿಸ್ ಮೂಲದ ಅರೇಲಿನ್ ಪ್ಯಾಬರ್ಟ್ ಮತ್ತು ಕರೈನ್ ದಂಪತಿ.

ಅರೇಲಿನ್ ಪ್ಯಾಬರ್ಟ್ ತಮ್ಮ ಕುಟುಂಬ ಸಮೇತ ಬೆಂಗಳೂರಿಗೆ ಬಂದು ಎರಡು ವರ್ಷಗಳಾಗಿವೆ. ಮಕ್ಕಳಾದ ಲ್ಯುಕಸ್ ಮತ್ತು ಕಜ್ರಾ ಕೂಡ ಜತೆಗಿದ್ದು, ಈ ಮಕ್ಕಳು ಇಲ್ಲೇ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಓದುತ್ತಿದ್ದಾರೆ. ಅರೇಲಿನ್ ವೋಲ್ವೊ ಇಂಡಿಯ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಎಂಜಿನಿಯರಿಂಗ್ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದಾರೆ. ಅರೇಲಿನ್ ಬೆಂಗಳೂರಿಗೆ ಬರುವ ಮುನ್ನ ಸ್ವೀಡನ್‌ನಲ್ಲಿದ್ದರು. ಉತ್ತರ ಯೂರೋಪ್‌ನಲ್ಲಿರುವ ಸ್ವೀಡನ್ ಹೆಚ್ಚು ಕಡಿಮೆ ಪ್ಯಾರಿಸ್‌ನಂತೆಯೇ ಇದ್ದು ಕೆಲಸದ ವಾತಾವರಣದಲ್ಲೂ ಹೆಚ್ಚಿನ ಹೋಲಿಕೆ ಇತ್ತು. ಆದರೆ ಬೆಂಗಳೂರಿನಲ್ಲಿ ಕೆಲಸದ ಸ್ವರೂಪವೇ ಬೇರೆ ಎಂಬುದು ಅರೇಲಿನ್ ಅಭಿಪ್ರಾಯ.

'ಸ್ವೀಡನ್‌ನಲ್ಲಿ ಚಳಿಗಾಲದಲ್ಲಿ ವಿಪರೀತ ಚಳಿ, ಸಹಿಸಲು ಅಸಾಧ್ಯವಾದ ಹವಾಮಾನ ಅಲ್ಲಿಯದು. ಆದರೆ ಬೆಂಗಳೂರಿನಲ್ಲಿ ಎಲ್ಲ ಕಾಲಗಳಲ್ಲೂ ಹವಾಮಾನ ಆಹ್ಲಾದಕರವಾಗಿದೆ. ಚಳಿಗಾಲದಲ್ಲೂ ಮಿತಿಮೀರಿದ ಚಳಿ ಇರದೆ ತಂಪು ತಂಪು ವಾತಾವರಣ ಮನಸ್ಸಿಗೆ ಖುಷಿ ಕೊಡುತ್ತದೆ' ಎನ್ನುತ್ತಾರೆ ಅರೇಲಿನ್.

'ಬೆಂಗಳೂರಿನಲ್ಲಿ ಕೆಲಸ ಮಾಡಲು ಖುಷಿ ಕೊಡಲು ಮತ್ತೊಂದು ಕಾರಣ, ಇಲ್ಲಿನ ಸುವ್ಯಸ್ಥಿತ ಕಚೇರಿ. ಜತೆಗೆ ಉತ್ತಮ ಸಹೋದ್ಯೋಗಿಗಳು, ಹೊಂದಾಣಿಕೆಯಿಂದ ಕೆಲಸ ಮಾಡುವ ಇವರ ಮನೋಭಾವ, ಸದಾ ಸಹಾಯ ಮಾಡುವ ಇಲ್ಲಿನ ಜನರ ಗುಣ. ಹೀಗಾಗಿ ಮತ್ತೆ ಪ್ಯಾರಿಸ್‌ಗೆ ಹೋಗುವ ಯೋಚನೆಯನ್ನೂ ಮಾಡಿಲ್ಲ' ಎನ್ನುವುದು ಅರೇಲಿನ್ ಅವರ ಖಚಿತ ನಿಲುವು.

'ಬೆಂಗಳೂರಿನ ರಸ್ತೆಗಳ ಬಗ್ಗೆ ಹೇಳುವುದಾದರೆ ಇಲ್ಲಿನ ಕೆಲವೆಡೆ ರಸ್ತೆಗಳು ಕೆಟ್ಟದಾಗಿದೆ. ಟ್ರಾಫಿಕ್ ಅಂತೂ ವಿಪರೀತ. ಜನದಟ್ಟಣೆಯೂ ಹೆಚ್ಚು. ದಿನದ ಎಲ್ಲ ಸಮಯದಲ್ಲೂ ಮಿತಿಮೀರಿದ ಟ್ರಾಫಿಕ್ ಕಿರಿಕಿರಿ ಎನಿಸುತ್ತದೆ. ಆದರೆ ಇಲ್ಲಿನ ಜನ ಬಹಳ ಸ್ನೇಹಪರರು, ಕ್ರಿಯಾಶೀಲರು. ಯಾವುದೇ ಸಮಯದಲ್ಲಿ ಸಹಾಯ ಕೇಳಿದರೂ ತಕ್ಷಣ ಸ್ಪಂದಿಸುವ ಗುಣ ಇವರಿಗಿದೆ' ಎನ್ನುತ್ತಾರೆ ಅರೇಲಿನ್ ಅವರ ಪತ್ನಿ ಕರೈನ್.

'ನಾನಿರುವ ವೋಲ್ವೊ ಕಚೇರಿಯಲ್ಲಿ ನಮ್ಮ ಟೀಮ್‌ನಲ್ಲಿ ಫ್ರಾನ್ಸ್, ಜಪಾನ್ ಮತ್ತು ಭಾರತೀಯ ಕೆಲಸಗಾರರಿದ್ದಾರೆ. ನಾವೆಲ್ಲರೂ ಪರಸ್ಪರ ಸಹಕಾರದಿಂದ ಕೆಲಸ ಮಾಡುತ್ತಿದ್ದು ಉತ್ತಮ ನಿರ್ವಹಣೆ ಮಾಡುತ್ತಿದ್ದೇವೆ. ಇದರಿಂದ ವೃತ್ತಿಯಲ್ಲಿ ಯಶಸ್ಸನ್ನೂ ಸಾಧಿಸುತ್ತಿದ್ದೇವೆ' ಎನ್ನುತ್ತಾರೆ ಅರೇಲಿನ್.

'ಭಾರತೀಯರು ಅದರಲ್ಲೂ ಬೆಂಗಳೂರಿಗರು ಕೌಟುಂಬಿಕ ಬದುಕಿಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಕುಟುಂಬದ ಹಿರಿಯರಿಗೆ ಬಹಳ ಗೌರವ ಕೊಡುತ್ತಾರೆ. ತಂದೆ ತಾಯಿಯರ ಮೇಲೆ ಬಹಳ ಪ್ರೀತಿ, ಅಭಿಮಾನ ಮಕ್ಕಳಿಗೆ. ಇಂತಹ ಭಾವನಾತ್ಮಕ ಸಂಬಂಧ ಬೇರೆ ದೇಶಗಳಲ್ಲಿ ನೋಡಿಯೇ ಇಲ್ಲ' ಎಂಬ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ ಈ ಪ್ಯಾರಿಸ್ ಮೂಲದ ಉದ್ಯೋಗಿ.

'ರಜಾ ದಿನಗಳಲ್ಲಿ ಹಲವು ಪ್ರವಾಸಿ ತಾಣಗಳನ್ನು ನೋಡಿದ್ದೇವೆ. ಅನೇಕ ದೇವಸ್ಥಾನಗಳಿಗೂ ಭೇಟಿ ನೀಡಿದ್ದೇವೆ. ಕೆಲವು ದೇವಸ್ಥಾನಗಳಲ್ಲಿ ಒಳಾಂಗಣ ವಿನ್ಯಾಸ, ವಾಸ್ತುಶಿಲ್ಪ ಚೆನ್ನಾಗಿವೆ. ಕೆಲವು ದೇವಸ್ಥಾನಗಳಂತೂ ಅದ್ಭುತ. ಪಾಂಡಿಚೇರಿಗೆ ಹೋಗಿದ್ದಾಗ ಅಲ್ಲಿ ಫ್ರೆಂಚ್ ಕಾಲೊನಿ ನೋಡಿ ದಂಗಾದೆವು. ಫ್ರಾನ್ಸ್ ಮೂಲದ ನೂರಾರು ಜನ ಒಂದೇ ಕಾಲೊನಿಯಲ್ಲಿದ್ದಾರೆ. ಒಂದೇ ಸಮುದಾಯದವರು ಹೆಚ್ಚಾಗಿ ವಾಸವಿರುವ ಕಾಲೊನಿಗಳು ಇಲ್ಲಿನ ಇತರ ಭಾಗಗಳಲ್ಲೂ ಇವೆ ಎಂಬುದನ್ನು ಗಮನಿಸಿದ್ದೇವೆ. ಬೆಂಗಳೂರಿನಲ್ಲೂ ಫ್ರಾನ್ಸ್‌ನಿಂದ ಬಂದ ಹಲವು ಕುಟುಂಬಗಳಿವೆ. ಇವರೆಲ್ಲರೂ ಪರಿಚಯವಿರುವ ಕಾರಣ ನಮಗೆ ನಮ್ಮ ಸ್ವಂತ ದೇಶ ಬಿಟ್ಟು ಹೊರಗೆ ಬಂದಿದ್ದೇವೆ ಅನಿಸುವುದೇ ಇಲ್ಲ' ಎನ್ನುತ್ತಾರೆ ಈ ದಂಪತಿ.

ಮಕ್ಕಳಿಗೂ ಶಾಲಾ ವಾತಾವರಣ ಹಿಡಿಸಿದೆಯಂತೆ. ಲ್ಯುಕಾಸ್ 12 ವರ್ಷ ಮತ್ತು ಈತನ ತಂಗಿ ಕಜ್ರಾ 10 ವರ್ಷದವಳಾಗಿದ್ದು, ಇಬ್ಬರೂ ಇಲ್ಲಿನ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಓದುತ್ತಿದ್ದಾರೆ. ಈ ಇಬ್ಬರು ಮಕ್ಕಳಿಗೂ ಶಾಲೆಯಲ್ಲಿ ಅನೇಕ ಸ್ನೇಹಿತರಿದ್ದಾರೆ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲೂ ಈ ಮಕ್ಕಳು ಮುಂದಿದ್ದಾರೆ. ಶಾಲೆಯಲ್ಲಿ ಕ್ರೀಡೆಗೆ ಆದ್ಯತೆ ಕೊಡುತ್ತಿದ್ದು, ಇವರಿಬ್ಬರೂ ಕ್ರೀಡೆಯಲ್ಲೂ ತೊಡಗಿಸಿಕೊಂಡಿದ್ದಾರೆ.

★ ಅವನೀಶ್